ಹೊರರಾಜ್ಯ ಗೋವಾಕ್ಕೆ ಹೋಗಿ ಕೊಡುವ ತೀರ್ಮಾನ ಮಾಡಿರುವುದರಲ್ಲಿ ಒಂದೊಂದು ಬಾಡಿ ಚಾಸಿ ಬಿಲ್ಡಿಂಗ್‌ನ್ನು ಕಟ್ಟುವಲ್ಲೂ ಕೂಡ ಎರಡು ಲಕ್ಷ ರೂಪಾಯಿಗಳ ಹೆಚ್ಚು ಅವ್ಯವಹಾರವಾಗಿರುವಂಥದ್ದು. 150 ಬಸ್‌ಗಳಿಗೆ ನೀವು ಚಾಸಿಯನ್ನು ಕೊಡಬೇಕು ಎನ್ನುವ ತೀರ್ಮಾನ ಮಾಡಿದ್ದೀರಿ. ಮೂರು ಕೋಟಿ ರೂಪಾಯಿಗೂ ಹೆಚ್ಚು ಅವ್ಯವಹಾರ ನಡೆಯುವ ಸಂದರ್ಭ ಇದೆ. ದಯಮಾಡಿ ಈಗಾಗಲೇ ಕೊಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಅಕಸ್ಮಾತ್ ಯಾವುದಾದರೂ ಒತ್ತಾಯಕ್ಕೋಸ್ಕರ ಕೊಟ್ಟಿದ್ದೇ ಆದರೆ ಬಹುಶಃ ತಾವು ರಾಜೀನಾಮೆ ಕೊಡುವ ಪ್ರಶ್ನೆ ಬರಬಹುದು ಎನ್ನುವುದರ ಬಗ್ಗೆ ತಾವು ನಿರ್ದಿಷ್ಟವಾಗಿ ಹೇಳಿ. ನಾವು ಕೊಡುವುದಿಲ್ಲ ಇನ್ನು ಮುಂದೆ, ನಮ್ಮ ಸಂಸ್ಥೆಯಲ್ಲಿ ಮಾಡುತ್ತೇವೆ ಎನ್ನುವ ತೀರ್ಮಾಣವನ್ನು ಖಚಿತವಾಗಿ ಹೇಳಬೇಕು.

ಅಧ್ಯಕ್ಷರು: ಆಯಿತು ಬಿಡಿ. ನೀವು ಅದನ್ನು ಕೊಟ್ಟಮೇಲೆ ರಾಜೀನಾಮೆಯನ್ನು ಕೊಡಬೇಕಾಗಿರುವುದು. ಈಗಿಲ್ಲ.

ದ. ಕನ್ನಡ ಜಿಲ್ಲೆಯಲ್ಲಿನ ಮುಜರಾಯಿ ಸಂಸ್ಥೆಗಳಿಗೆ ತಸ್ತೀಕ್ ಹಣ ಮಂಜೂರಾತಿ.

1369-ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಸರ್ಕಾರದವರು ನೀಡುತ್ತಿರುವ ತಸ್ತಿಕ್‌ನ ಮೊತ್ತ ಎಷ್ಟು?

ಆ) ಸರ್ಕಾರದವರು ನೀಡುತ್ತಿರುವ ಈ ಕನಿಷ್ಠ ಮೊತ್ತದ ತಸ್ತಿಕ್‌ನ ಮೊತ್ತವನ್ನು ಹೆಚ್ಚು ಮಾಡುವ ವಿಚಾರವನ್ನು ಹೊಂದಿದೆಯೇ?

ಇ) ಆದಾಯವಿಲ್ಲದ ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಮುಜರಾಯಿ ದೇವಸ್ಥಾನಗಳಿಗೆ ಪ್ರತಿವರ್ಷವೂ ರೂ. 84109 ತಸ್ತಿಕ್ ಅನ್ನು ನೀಡಲಾಗುತ್ತದೆ.

ಆ) ಇಲ್ಲ

ಇ) ದೇವಸ್ಥಾನಗಳ ಜೀರ್ಣೋದ್ಧಾರದ ಬಗ್ಗೆ ಸರ್ಕಾರದಿಂದ ಪ್ರತಿ ವರ್ಷ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. ಆಯವ್ಯಯದಲ್ಲಿ ಈ ಬಗ್ಗೆ ಒದಗಿಸಲಾಗುವ ಅನುದಾನದ ಆಧಾರದ ಮೇಲೆ ಮತ್ತು ಈ ಬಗ್ಗೆ ದೇವಾಲಯಗಳಿಂದ ಬರುವ ಬೇಡಿಕೆಗಳ ಆಧಾರದ ಮೇಲೆ ಈ ಸಹಾಯಧನ ಮಂಜೂರು ಮಾಡಲಾಗುತ್ತಿದೆ.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 1418 ದೇವಸ್ಥಾನಗಳಿವೆ. ಸರ್ಕಾರ 84 ಸಾವಿರ ರೂಪಾಯಿಗಳನ್ನು ತಸ್ತೀಕ್ ಹಣವನ್ನು ಬಿಡುಗಡೆಗೊಳಿಸಿದೆ

ಎಂದು ಹೇಳಿದ್ದಾರೆ. ಆದರೆ ಈ ಮೊತ್ತ 110ವರ್ಷಗಳ ಹಿಂದೆನಿಗತಿಯಾದದ್ದು. ಅದೇ ದಾಮಾಷದಲ್ಲಿ ಈಗಲೂ ಕೂಡ ಅದನ್ನೇ ಕೊಟ್ಟುಕೊಂಡು ಹೋದರೆ ಅದು ಯಾವುದೇ ತರದಲ್ಲಿ ಆ ದೇವಸ್ಥಾನಗಳ ಯಾವುದೇ ಪೂಜಾ ವಿಧಾನಗಳನ್ನು ಮುಂದುವರೆಸಿಕೊಂಡು ಬರಲಿಕ್ಕೆ ಸಾಧ್ಯವಿಲ್ಲ. ಎರಡನೆಯದಾಗಿ ಭೂಸುಧಾರಣ ಕಾನೂನುಬಂದ ನಂತರ ಎಷ್ಟೋ ದೇವಾಲಯಗಳು ದೇವಸ್ಥಾನಗಳು ತಮ್ಮ ಜಮೀನುಗಳನ್ನು ಕಳೆದು ಕೊಂಡು ನಿರ್ಗತಿರಾಗಿರುವಂಥ ಈ ಪರಿಸ್ಥಿತಿಯಲ್ಲಿ ಸರ್ಕಾರ ಅದರ ಸೇವೆಗೋಸ್ಕರ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಅದರಷ್ಟಕ್ಕೆ ಬಿಟ್ಟು ಕೊಂಡರೆ ಖಂಡಿತಾ ಕಷ್ಟಸಾಧ್ಯಯ ಅದರೊಂದಿಗೆ ನಮ್ಮ ರಾಜ್ಯದಲ್ಲಿ ಐದು ವಲಯಗಳನ್ನಾಗಿ ಮಾಡಿಕೊಂಡು ಬೇರೆ ಬೇರೆ ತರಹದ ಕಾನೂನುಗಳನ್ನು ಮಾಡಿದ್ದರಿಂದ ಸಮಾನವಾದ ಕಾನೂನನ್ನು ರಾಜ್ಯದಲ್ಲಿ ತಂದು ಈ ದೇವಸ್ಥಾನಗಳ ಜೀರ್ಣೋದ್ಧಾರಗಳು ಮತ್ತು ದಿನನಿತ್ಯದ ಕೆಲಸಕಾರ್ಯಗಳಿಗೆ ಬೇಕಾದಂಥ ಮೊತ್ತವನ್ನು ಈಗಿನ ಅಧುನೀಕರಣ ರೀತಿಯಲ್ಲಿ ಅದನ್ನು ಬಿಡುಗಡೆಗೊಳಿಸುತ್ತೀರಾ ಎಂದು ಸರ್ಕಾರಕ್ಕೆ ನಾನು ಕೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳುವುದು ನಿಜ. ಹಿಂದೆ ಮದ್ರಾಸ್ ಸರ್ಕಾರವಿದ್ದಾಗ ಆ ಭಾಗ ಏನು ತಸ್ತೀಕ್ ಹಣ ಕೊಡಲಾಗುತ್ತಿತ್ತೋ ಇವತ್ತು ಅದನ್ನೇಕೊಡುತ್ತಿದ್ದೇವೆ. ಕೆಲವು ದೇವಸ್ಥಾನಗಳಿಗೆ ಐದು ರೂಪಾಯಿ ಕೂಡ ಸಿಗುತ್ತಿಲ್ಲ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಬಂದಿರುವ ಸಮಸ್ಯೆ ಏನೆಂದರೆ ಈ ದೇವಸ್ಥಾನಗಳೂ ಭಕ್ತಾದಿಗಳ ಒಂದು ಸಹಕಾರದಿಂದ ನಡೆಯಬೇಕೇ ವಿನಹ ಪ್ರತಿಯೊಂದಕ್ಕೂ ಸರ್ಕಾರ ಹಣ ಕೊಟ್ಟುಕೊಂಡು ಕುಳಿತುಕೊಳ್ಳುವುದು ನಮ್ಮ ಹಣಕಾಸಿನ ಪರಿಸ್ಥಿತಿಯಿಂದ ಕಷ್ಟಸಾಧ್ಯವಾಗಿರುತ್ತದೆ. ಆದರೆ ಹಲವಾರು ಬೇಡಿಕೆಗಳು ಬಂದಿದೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ, ಕೊಡುವುದಕ್ಕಾಗುತ್ತೋ ಅಥವಾ ಇಲ್ಲವೋ ಎಂಬುದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಇನ್ನೂ ಎರಡನೆಯದಾಗಿ, ಮಾನ್ಯ ಸದಸ್ಯರು ಕಾಂಪ್ರೆಹೆನ್ಸೀವ್ ಆಕ್ಟ್ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಈ ಆಕ್ಟ್ ರೆಡಿಯಾಗಿದೆ ಅದು. ಲಾ ಡಿಪಾರ್ಟ್‌ಮೆಂಟಿನ ಸ್ಕ್ರೂಟಿನಿಯಲ್ಲಿದೆ. ಬಹುಶಃ ಈ ಅಧಿವೇಶನದಲ್ಲಿ ತರುವುದಕ್ಕೆ ಆಗಲಾರದು ಎಂದು ಕಾಣುತ್ತದೆ. ಏಕೆಂದರೆ ಬೇರೆ ಎರಡು ಮಸೂದೆಗಳನ್ನು ತರುತ್ತಿರುವುದರಿಂದ ಈ ಮಸೂದೆ ತರುವುದಕ್ಕಾಗಲಿಲ್ಲ. ಆದರೆ ಮುಂದಿನ ಅಧಿವೇಶನಕ್ಕೆ ಡೆಫನೇಟ್ ಆಗಿ ಈ ಮಸೂದೆಯನ್ನು ತರುತ್ತಿದ್ದೇನೆ. ಬಿಲ್ ರೆಡಿಯಾಗಿದೆ.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಮುಜರಾಯಿ ದೇವಸ್ಥಾನಗಳನ್ನು ಬಿಟ್ಟು ಖಾಸಗಿ ಟ್ರಸ್ಟಗಳವರು ನಮ್ಮ ರಾಜ್ಯದಲ್ಲಿ ದೇವಸ್ಥಾನಗಳನ್ನುಕಟ್ಟಿ ಅದನ್ನು ನಡೆಸುತ್ತಿದ್ದಾರೆ. ಇದಕ್ಕೆ ಸರ್ಕಾರಹಣ ಕೊಡುತ್ತಿದೆ. ಈ ಸರ್ಕಾರ ಹಣ ಕೊಡುತ್ತಿದೆ, ಮತ್ತು ಅವರೂ ಕೂಡ ಸಾಕಷ್ಟು ಗಳಿಸುತ್ತಿದ್ದಾರೆ. ಇದರಲ್ಲಿ ಸಾಕಷ್ಟು ದುರ್ವಿನಿಯೋಗ ಕೂಡ ಆಗುತ್ತಿದೆ. ಸರ್ಕಾರ ಇದಕ್ಕೆಷ್ಟು ಹಣವನ್ನು ಕೊಡುತ್ತಿದ್ದಾರೆ. ಅದನ್ನು ಯಾವ ರೀತಿ ನಡೆಸುತ್ತಿದ್ದಾರೆ ಎಂದು ನಮಗೆ ಬೇಕಾಗಿದೆ.

ಅಧ್ಯಕ್ಷರು:- ನೋಟೀಸ್ ಕೊಟ್ಟರೆ ಎಲ್ಲಾ ಒದಗಿಸಿಕೊಡುತ್ತಾರೆ.